# ಪಶ್ಚಾತ್ತಾಪ ಅಥವಾ ನಾಶನ!

## ಲೂಕ 13:1-5

ಒಂದು ದಿನ, ಯೇಸು ಬೋಧಿಸುತ್ತಿರುವಾಗ, "ಪಿಲಾತನು ಗಲಿಲಾಯದವರ ರಕ್ತವನ್ನು ಅವರು ಕೊಟ್ಟ ಬಲಿಗಳ ಸಂಗಡ ಬೆರಸಿದನೆಂದು" (ಲೂಕ 13:1) ಆತನಿಗೆ ಕೆಲವರಿಂದ ಒಂದು ವರದಿ ಬಂತು. ಈ ಗಲಿಲಾಯದವರು ಎಲ್ಲಿದ್ದರು[1] ಎನ್ನುವಂಥದ್ದು ನಮಗೆ ಸರಿಯಾಗಿ ಗೊತ್ತಿಲ್ಲ, ಆದರೆ, ಈ ರೀತಿಯಲ್ಲಿ ಕೊಲೆ ಮಾಡಲ್ಪಡುವುದು ಅಸಾಧಾರಣವಾಗಿ ಕೆಟ್ಟದ್ದಾಗಿದೆಯೆಂದು ಕ್ರಿಸ್ತನ ಬೋಧನೆ ಕೇಳುವವರು ಆಲೋಚಿಸಿದರು. ಯೇಸು ಅವರಿಗೆ, "ಆ ಗಲಿಲಾಯದವರು ಅಂಥ ಕೊಲೆಯನ್ನು ಅನುಭವಿಸಿದ್ದರಿಂದ ಅವರನ್ನು ಎಲ್ಲಾ ಗಲಿಲಾಯದವರಿಗಿಂತ ಪಾಪಿಷ್ಠರೆಂದು ಬಾವಿಸುತ್ತಿರೋ? ಹಾಗೆ ಭಾವಿಸಕೂಡದೆಂದು ನಾನು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ" (ವಚನಗಳು 2, 3) ಎಂದು ಹೇಳಿದನು. ನಂತರ ಕರ್ತನು ಅದೇ ವಿಷಯವನ್ನು ಒತ್ತಿ ಹೇಳಲು ಎರಡನೆಯ ದೃಷ್ಟಾಂತವನ್ನು ಹೇಳಿದನು: "ಅಥವಾ ಸಿಲೋವಾನಲ್ಲಿ ಬಿದ್ದು ಸತ್ತ ಆ ಹದಿನೆಂಟು ಮಂದಿಯು ಯೆರೂಸಲೇಮಿನಲ್ಲಿ ವಾಸವಾಗಿರುವ ಎಲ್ಲಾ ಮನುಷ್ಯರಿಗಿಂತಲೂ ಅಪರಾಧಿಗಳೆಂದು ಬಾವಿಸುತ್ತಿರೋ? ಹಾಗಲ್ಲವೆಂದು ನಿಮಗೆ ಹೇಳುತ್ತೇನೆ ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಅವರಂತೆ ಹಾಳಾಗಿ ಹೋಗುವಿರಿ ಎಂದು ಹೇಳಿದನು" (ವಚನಗಳು 4, 5).[2]

ಕೆಲವು ವಾಕ್ಯಗಳು ಬೈಬಲಿನಲ್ಲಿ ದುಪ್ರತಿಯಾಗಿದೆ, ಪದಕ್ಕೆ ಪದ, ಆದರೆ ಲೂಕ 13ರಲ್ಲಿ ಎರಡಿವೆ.[3] ವಚನ 3 ಹೀಗೆ ಹೇಳುತ್ತದೆ, "ದೇವರ ಕಡೆಗೆ ನೀವೂ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ." ವಚನ 5ರಲ್ಲಿ ಹೀಗೆ ಹೇಳುತ್ತದೆ, "ದೇವರ ಕಡೆಗೆ ನೀವೂ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಅವರಂತೇ ಹಾಳಾಗಿ ಹೋಗುವಿರಿ." ಆ ವಿಷಯದ ಕುರಿತು ಪವಿತ್ರಾತ್ಮನು ನಾವು ಸಂದೇಶವನ್ನು ತಪ್ಪಿಸಿಕೊಳ್ಳದೆ ಇರುವುದಕ್ಕಾಗಿ ಈ ರೀತಿಯ ದುಪ್ರತಿ ಅಥವಾ ಎರಡೆರಡು ಬಾರಿ ಹೇಳಿದನು: ಪಶ್ಚಾತ್ತಾಪ ಅಥವಾ ನಾಶನ.

### "ನೀವು ಪಶ್ಚಾತ್ತಾಪ ಪಡದಿದ್ದರೆ ..."

#### ಪಶ್ಚಾತ್ತಾಪಪಡುವುದು ಬೇಡಿಕೆಯಾಗಿದೆ

ಮಾನಸಾಂತರದ ಅವಶ್ಯಕತೆಯನ್ನು ಹಳೆ ಒಡಂಬಡಿಕೆ[4] ಮತ್ತು ಹೊಸ ಒಡಂಬಡಿಕೆಯಲ್ಲಿ ಒತ್ತಿ ಹೇಳಲ್ಪಟ್ಟಿದೆ. ಸ್ನಾನಿಕನಾದ ಯೋಹಾನನು ಬೋಧಿಸಲು ಬಂದಾಗ ಪರಲೋಕ ರಾಜ್ಯ ಸಮೀಪವಾಯಿತು (ಮತ್ತಾಯ 3:2). ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಕೇಳುಗರನ್ನು ವಿನಂತಿಸಿದನು. ಯೇಸು ಮತ್ತು ಆತನ ಶಿಷ್ಯರು ಅದೇ ಆದೇಶಗಳನ್ನು ಕೊಟ್ಟರು (ಮತ್ತಾಯ 4:17; ಮಾರ್ಕ 6:12). ಕರ್ತನು ಮಹಾ ನಿಯೋಗವನ್ನು ಕೊಡುವಾಗ, ದೇವರ ಕಡೆಗೆ ತಿರುಗಿಕೊಳ್ಳುವದು ಆ ಸಂದೇಶದ ಭಾಗವಾಗಿದೆ (ಲೂಕ 24:47).[5] ಸಂಪೂರ್ಣವಾಗಿ ಸುವಾರ್ತೆಸಾರಲು ಪ್ರಾರಂಭಿಸುವಾಗ, ಪಾಪಿಗಳು ದೇವರ ಕಡೆಗೆ ತಿರುಗಲು ಬೋಧಿಸಲ್ಪಡುತ್ತಾರೆ (ಅಪೊಸ್ತಲರ ಕೃತ್ಯಗಳು 2:38; 3:19, 26; 17:30, 31).

ದೇವರ ಕಡೆಗೆ ತಿರುಗಿಕೊಳ್ಳುವ ವಿಷಯವನ್ನು ಬೈಬಲು ಒತ್ತಿಹೇಳುತ್ತದೆಂದು ಸೂಚಿಸಲಾಗಿದೆ, ಯಾಕೆಂದರೆ ದೇವರು ಕೊಟ್ಟ ಆಜ್ಞೆಗಳಲ್ಲಿ ಪಶ್ಚಾತ್ತಾಪಡುವುದು ಕಠಿಣವಾದ ಕಾರ್ಯವಾಗಿದೆ. ರುಜುವಾತುಗಳನ್ನು ಅರ್ಥಮಾಡಿಕೊಂಡಾಗ ನಂಬುವುದು ಅನೇಕರಿಗೆ ಸಮಸ್ಯೆಯಾಗಿರುವುದಿಲ್ಲ, ಉದಾಹರಣೆಗೆ, USನಲ್ಲಿ ಸುಮಾರು ಪ್ರತಿ ಶತ 90ರಷ್ಟು

ನಾಗರೀಕರು ದೇವರಲ್ಲಿ ನಂಬಿಕೆ ಇಡುತ್ತಾರೆ - ಅದರಲ್ಲಿ ಹೆಚ್ಚಿನ ಜನರು ಯೇಸುವಿನಲ್ಲಿ[6] ನಂಬಿಕೆ ಇಡುವವರಾಗಿದ್ದಾರೆ. ಇಷ್ಟೆಲ್ಲದೆ, ಜನರು ಒಂದು ಸಾರಿ ಮನಸಾರೆ ದೇವರ ಕಡೆಗೆ ತಿರುಗಿದರೆ, ಅವರಿಗೆ ದೇವರ ಬೇರೆ ಆಜ್ಞೆಗಳಿಗೆ ವಿಧೇಯರಾಗಲು ಸಮಸ್ಯೆಯಾಗುವದಿಲ್ಲ. ಹಾಗಿದ್ದರೂ, ಮಾನಸಾಂತರಪಡುವುದು ಕಠಿಣವಾಗಿದೆ - ಅದು ಬಹಳ ಕಠಿಣವಾಗಿದೆ!

ಮಾನಸಾಂತರಪಡುವುದು ಎರಡು ಕಾರಣಗಳಿಂದ ಕಠಿಣವಾಗಿದೆ. ಮೊದಲನೆಯದು, ಮಾನಸಾಂತರಪಡುವ ಅವಶ್ಯಕತೆ ನಮ್ಮ ಹೆಮ್ಮೆಯ ಮೇಲೆ ದಾಳಿ ಮಾಡುತ್ತದೆ - ಮನುಷ್ಯರು ಹೆಮ್ಮೆಯಿಂದ ತುಂಬಿಹೋಗಿದ್ದಾರೆ.[7] ಎರಡನೆಯದು, ನಾವು ನೋಡಿದಂತೆ ನಿಜವಾದ ಮಾನಸಾಂತರವು ಜೀವನದ ಶೈಲಿಯಲ್ಲಿ ಬದಲಾವಣೆಯನ್ನು ಕೇಳುತ್ತದೆ - ಆದರೆ ಹೆಚ್ಚಿನ ಜನರು ಬದಲಾವಣೆಯನ್ನು ಇಷ್ಟಪಡುವ*ದಿಲ್ಲ*, ಆದುದರಿಂದ ಮಾನಸಾಂತರ ಪಡುವುದು ನಮ್ಮಲ್ಲಿ ಅನೇಕರಿಗೆ ಕಠಿಣವಾಗಿರುತ್ತದೆ. J. W. McGarvey ಹೀಗೆ ಬರೆಯುತ್ತಾನೆ, "ಮನುಷ್ಯನ ರಕ್ಷಣೆಗೆ ಮನುಷ್ಯನ ಚಿತ್ತದ ಹಟಮಾರಿತನ ದೊಡ್ಡ ಅಡಚಣೆಯಾಗಿದೆ."[8]

**ಪಶ್ಚಾತ್ತಾಪ ಸ್ಪಷ್ಟೀಕರಿಸಲಾಗಿದೆ**

ನಾವು ಮುಂದೆ ಹೋಗುವದಕ್ಕಿಂತ ಮೊದಲು, ಪಶ್ಚಾತ್ತಾಪ ಏನೆಂಬುದು ನಾವು ನಿಶ್ಚಯಿಸಿಕೊಳ್ಳಬೇಕಾಗಿದೆ. ಧಾರ್ಮಿಕ ಜನರು[9] "ಪಶ್ಚಾತ್ತಾಪಪಡುವುದನ್ನು" "ನಾನು ಪಾಪ ಮಾಡಿದ್ದೇನೆ ಕ್ಷಮಿಸು" ಎಂದು ಹೇಳುತ್ತಾರೆ. ಇದು ನಿಜವೇ, ಒಬ್ಬನು ಹಿಂದಿನ ಪಾಪಗಳಿಗೆ ದುಃಖ ವ್ಯಕ್ತಪಡಿಸದೆ ಪಶ್ಚಾತ್ತಾಪ ಆಗುವದಿಲ್ಲ, ಆದರೆ ಪಾಪಗಳಿಗೋಸ್ಕರ ದುಃಖಪಡುವದು ಮಾತ್ರವೇ ಸರಿಯಾದ ಪಶ್ಚಾತ್ತಾಪ ಆಗುವದಿಲ್ಲ. ನಿಜವಾಗಲು ಮಾನಸಾಂತರಪಡದೇ ದುಃಖವನ್ನು ವ್ಯಕ್ತಪಡಿಸುವುದು ಸಾಧ್ಯವಿದೆ.

ಈ ದೃಶ್ಯವನ್ನು ಕಲ್ಪಿಸಿಕೊಳ್ಳಿರಿ. (ಅದರೊಂದಿಗೆ ನಿಮ್ಮಲ್ಲಿ ಕೆಲವರು ಗುರುತಿಸಿಕೊಳ್ಳಿರಿ!) ಒಬ್ಬ ತಾಯಿ ಅತಿಥಿಗಳಿಗೋಸ್ಕರ ಸಿಹಿತಿಂಡಿಗಳನ್ನು ಬಿಸಿ ಬಿಸಿಯಾಗಿ ಸಿದ್ಧಮಾಡಿ ಊಟದ ಮೇಜಿನ ಮೇಲೆ ಬಿಸಿ ಇರುವಾಗಲೇ ಇಟ್ಟಳು. "ಇವುಗಳಿಂದ ದೂರವಿರು!" ಎಂದು ತನ್ನ ಚಿಕ್ಕ ಮಗನಿಗೆ ಹೇಳಿದಳು. ಆಗ ತಾನೇ ಬಿಸಿಯಾಗಿರುವ ಈ ತಿಂಡಿಯ ಸುವಾಸನೆ ಅವನಿಗೆ ಶೋಧನೆಯನ್ನುಂಟು ಮಾಡಿತು, ತಾಯಿ ತಿರುಗಿ ಅಡಿಗೆ ಮನೆಗೆ ಬಂದಳು, ಅಲ್ಲಿ ಅರ್ಧತಿಂಡಿ ಮಗನು ತಿಂದು ಅರ್ಧ ಉಳಿಸಿದ್ದಾನೆ, ತಿಂಡಿಗಳನ್ನು ಮಗನು ಕೈಯಲ್ಲಿ ಹಿಡಿದುಕೊಂಡಿದ್ದಾನೆ, ಮತ್ತು ಅವನು ತಪ್ಪು ಮಾಡಿದ ಹೆದರಿಕೆ ಮತ್ತು ತಿಂಡಿಯ ತುಣುಕುಗಳು ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು ಆ ಹುಡುಗನು ಕ್ಷಮೆ ಕೇಳಿದನೋ? ಹೌದು. ಅವನು ಹಿಡಿಯಲ್ಪಟ್ಟಿದ್ದನು ಅದಕ್ಕಾಗಿ ಕ್ಷಮೆ ಕೇಳಿದನು ಯಾಕೆಂದರೆ ಅವನು ತನ್ನ ತಾಯಿಗೆ ಅವಿಧೇಯನಾಗಿದ್ದನು. ನಾಳೆ ಆ ತಾಯಿಯು ಇನ್ನೂ ಹೆಚ್ಚು ತಿಂಡಿಗಳನ್ನು ಮಾಡಿದಳೋ? ಅದೇ ಸನ್ನಿವೇಶ ಪುನರಾವರ್ತನೆ ಆಗಿರಬಹುದೋ? ಆಗಿರಬಹುದು, ಯಾಕೆ? ಯಾಕೆಂದರೆ ಹುಡುಗನು *ಕ್ಷಮೆ* ಕೇಳಿದ್ದನು ಆದರೆ ಅವನು *ಪಶ್ಚಾತ್ತಾಪಪಟ್ಟಿಲ್ಲ.*

ನನ್ನನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬೇಡಿರಿ. ಒಬ್ಬನು ತಪ್ಪು ಮಾಡಿದಾಗ ಕ್ಷಮೆ ಕೇಳುವದು ಅವಶ್ಯವಾಗಿದೆ. ನಿಜಾಂಶವೇನಂದರೆ, ಇದನ್ನು ನಾನು "ಮಾನಸಾಂತರದ ಕಾರ್ಯ" ಎಂದು ಕರೆಯುವದು ಅವಶ್ಯಕವಾಗಿದೆ. ಹೇಗಿದ್ದರೂ, ಫಲಿತಾಂಶ ನೀಡುವ ಮೊದಲೆ ದುಃಖವು ಒಂದು ರೀತಿಯ ದುಃಖವಾಗಿರಬೇಕಾಗಿತ್ತು. 2 ಕೊರಿಂಥ 7:9, 10 ಸರಿಯಾದ ವಾಕ್ಯಭಾಗವಾಗಿದೆ. ಪೌಲನು ತನ್ನ ಹಿಂದಿನ ಪತ್ರಿಕೆಯಲ್ಲಿ ಖಂಡಿಸಿದ್ದನ್ನು ಸೂಚಿಸುತ್ತಾ ಹೀಗೆ ಬರೆಯುತ್ತಾನೆ,

> ನಿಮಗೆ ದುಃಖವಾಯಿತೆಂದು ನಾನು ಸಂತೋಷಪಡದೆ ನಿಮಗೆ ದುಃಖಪಟ್ಟು ಬೇರೆ ಮನಸ್ಸನ್ನು ಹೊಂದಿದ್ದಕ್ಕಾಗಿ ಸಂತೋಷಪಡುತ್ತೇನೆ. ನೀವು ದೇವರ ಚಿತ್ತಾನುಸಾರವಾಗಿ ದುಃಖಿಸಿದ್ದರಿಂದ ನಮ್ಮಿಂದ ಯಾವದರಲ್ಲಿಯೂ ನಷ್ಟಪಡಲಿಲ್ಲವಲ್ಲಾ,

> ದೇವರ ಚಿತ್ತಾನುಸಾರವಾಗಿರುವ ದುಃಖವು ಮಾನಸಾಂತರವನ್ನುಂಟು ಮಾಡಿ ರಕ್ಷಣೆ ಕಾರಣವಾಗಿದೆ, ಆ ಮಾನಸಾಂತರದಲ್ಲಿ ಪಶ್ಚಾತ್ತಾಪಕ್ಕೆ ಆಸ್ಪದವಿಲ್ಲ. ಆದರೆ ಲೋಕ ದವರಿಗಿರುವಂಥ ದುಃಖವು ಮರಣವನ್ನುಂಟು ಮಾಡುತ್ತದೆ.

ಕೆಲವು ಸಾರಿ ಜನರು ತಪ್ಪುಮಾಡಿ ಕ್ಷಮೆಯನ್ನು ಕೇಳುತ್ತಾರೆ. ಆದರೆ ಅವರ ದುಃಖವು "ಲೋಕದ ದುಃಖವಾಗಿರುತ್ತದೆ." ಅವರು ಹಿಡಿಯಲ್ಪಟ್ಟಿರಬಹುದು. ಅದಕ್ಕಾಗಿ ಅವರು ಕ್ಷಮೆಯನ್ನು ಕೇಳುತ್ತಿರಬಹುದು ಅಥವಾ ಅವರು ಮಾಡಿದ ಕೃತ್ಯಕ್ಕೆ ಮನಸ್ಸಾಕ್ಷಿ ತೊಂದರೆ ಅನುಭವಿಸುತ್ತಿರಬಹುದು. ಹೇಗಿದ್ದರೂ, ಅವರು ನಿಜವಾಗಿಯೂ ಮಾನಸಾಂತರಪಡಲಿಲ್ಲ.[1] ಇದಕ್ಕೆ ಭಿನ್ನವಾದದ್ದು "ದೇವರ ಚಿತ್ತಾನುಸಾರವಾಗಿರುವ ದುಃಖ." KJV ಇದನ್ನು "ದೈವೀಕ ದುಃಖ" ಎಂದು ಕರೆಯುತ್ತದೆ. "ದೈವೀಕ ದುಃಖವೆಂದರೇನು"? Jimmy Allen ಅವರು ಹೀಗೆ ಬರೆದಿದ್ದಾರೆ,

> ಇದನ್ನು ಸರಿಯಾಗಿ ನಾನು ಅರ್ಥಮಾಡಿಕೊಂಡಿದ್ದರೆ, ಇದು ನಮ್ಮ ಹೃದಯದಿಂದ ಬರುವಂಥ ಕೊರಗು ಮತ್ತು ದುಃಖವಾಗಿದೆ ಯಾಕೆಂದರೆ ದೇವರಿಗೆ ಮನನೊಯಿಸಿದ್ದೇವೆ. ಇದಕ್ಕಾಗಿ ನಾವು ಶಿಕ್ಷೆ ಹೊಂದುತ್ತೇವೋ ಅಥವಾ ಇಲ್ಲವೋ, ಅದರ ಬಗ್ಗೆ ನಮಗೆ ದುಃಖವಿರಲಿ. ನಮ್ಮ ಕಾಲಿನಿಂದ ದೇವರ ಶ್ರೇಷ್ಟವಾದ ಹೃದಯವನ್ನು ತುಳಿದಿದ್ದೇವೆ. ನಾವು ದೇವರನ್ನು ಅವಮಾನಪಡಿಸಿದ್ದೇವೆ ಮತ್ತು ಮನನೊಯಿಸಿದ್ದೇವೆ ಎಂದು ತಿಳಿದುಕೊಂಡಾಗ ನಮ್ಮ ಹೃದಯವು ಒಡೆಯುತ್ತದೆ.[11]

ಪೌಲನು ಇಂಥಹ ದುಃಖವು "ಮಾನಸಾಂತರವನ್ನು *ಉಂಟುಮಾಡುತ್ತದೆ*" ಎಂದು ಹೇಳಿದನು - ಅಂತಹ ದುಃಖ ಮಾನಸಾಂತರವನ್ನಲ್ಲ ಆದರೆ ಅದು ಮಾನಸಾಂತರವನ್ನು *ಉಂಟುಮಾಡುತ್ತದೆ.* ಪೇತ್ರನು ಪಂಚಶತ್ತಮ ದಿನದಂದು ಬೋಧಿಸುತ್ತಿರುವಾಗ (ಅಪೊಸ್ತಲರ ಕೃತ್ಯಗಳು 2:14-36) ಅಲ್ಲಿ ಬಂದಿದ್ದ ಜನರಿಗೆ ಪ್ರಸಂಗವನ್ನು ಕೇಳಿ "ಹೃದಯದಲ್ಲಿ ಅಲಗು" ನೆಟ್ಟಂತಾಯಿತು (ಅಪೊಸ್ತಲರ ಕೃತ್ಯಗಳು 2:37); ಅವರು ಮಾಡಿದ ಪಾಪಗಳ ಬಗ್ಗೆ ಅವರಿಗೆ ಮನವರಿಕೆ ಉಂಟಾಯಿತು. ಯೇಸುವನ್ನು ಶಿಲುಬೆಗೆ ಹಾಕಿದ್ದರಿಂದ, ಅವರಿಗೆ ವ್ಯಥೆ ಉಂಟಾಯಿತ್ತೆಂದು ನಾವು ನಿಸ್ಸಂದೇಹವಾಗಿ ಹೇಳಬಹುದು. ಆದರೂ, ಅವರು *ಮಾನಸಾಂತರಪಡುವ* ಅವಶ್ಯಕತೆ ಇದೆಯೆಂದು ಹೇಳಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:38). ಪಾಪಗಳಿಗಾಗಿ ದುಃಖಪಡುವುದೇ ಮಾನಸಾಂತರವಲ್ಲ.

ಪಶ್ಚಾತ್ತಾಪವೆಂದರೆ "ನೀನು ಮಾಡಿದ ಪಾಪಗಳಿಗಾಗಿ ಕ್ಷಮೆಪಡುವುದು" ಅಲ್ಲವೆಂದು ವಿವರಿಸುವ ಧಾರ್ಮಿಕ ಜನರು ಬಹುಶಃ ಈ ರೀತಿಯ ವಿವರಣೆಯನ್ನು ಕೊಡುವರು: "ತಪ್ಪಾದದ್ದನ್ನು ಮಾಡುವದನ್ನು ನಿಲ್ಲಿಸುವುದು ಮತ್ತು ಸರಿಯಾದದ್ದನ್ನು ಮಾಡಲು ಪ್ರಾರಂಭಿಸುವುದೆಂದು ಇದರರ್ಥ."[12] "ಮಾನಸಾಂತರ ಪ್ರಕ್ರಿಯೆಯಲ್ಲಿ" ಜೀವನ ಬದಲಾವಣೆ ಒಂದು ಅವಶ್ಯಕವಾದ ವಿಷಯವಾಗಿದೆ, ಆದರೆ ಜೀವನ ಬದಲಾವಣೆಯೇ ಮಾನಸಾಂತರವಲ್ಲ. ಒಬ್ಬನು ಜೀವನವನ್ನು ಬದಲಾಯಿಸಿಕೊಳ್ಳಬಹುದು ಮತ್ತು ಮಾನಸಾಂತರಪಡೆಯದೇ ಇರಬಹುದು. ಒಬ್ಬ ವ್ಯಕ್ತಿಯು ತನ್ನ ಜೀವನ ಶೈಲಿ ಅಪಮಾನವಾಗಿದೆ ಮತ್ತು ತೊಂದರೆಗೆ ಒಳಗಾಗಿದೆ ಎಂದು ಅರ್ಥಮಾಡಿಕೊಂಡು - ಮಾನಸಾಂತರಪಡೆಯದೆ - ತನ್ನ ಜೀವನವನ್ನು ಬದಲಾಯಿಸಿಕೊಳ್ಳಲು ನಿಶ್ಚಯಿಸಿಕೊಳ್ಳುತ್ತಾನೆ. ಆತನ ಬದಲಾವಣೆಗೆ ಪ್ರೇರಣೆ ಹೆಮ್ಮೆಯಾಗಿದೆಯೇ ಹೊರತು, ಆತನು ದೇವರಿಗೆ ಅವಿಧೇಯನಾಗಿದ್ದದರಿಂದ ಉಂಟಾದ ಹೃದಯಪೂರ್ವಕ ದುಃಖವಲ್ಲ.

ಪುನಃ ನನ್ನನ್ನು ತಪ್ಪಾಗಿ ಅರ್ಥಮಾಡಿಕೊಳ್ಳಬೇಡಿ, ಜೀವನ ಬದಲಾವಣೆ ಮಾಡಿ ಕೊಳ್ಳುವದು ಮುಖ್ಯವಾಗಿದೆ, ಅದು ಅವಶ್ಯವಾಗಿದೆ. ಅಂತಹ ಬದಲಾವಣೆ ನಿಜವಾದ ಮಾನಸಾಂತರದ ಫಲಿತಾಂಶವಾಗಿದೆ ಎಂದು ಬೈಬಲು ಬೋಧಿಸುತ್ತದೆ. ಸ್ನಾನಿಕನಾದ

ಯೋಹಾನನು "ಹಾಗಾದರೆ ನಿಮ್ಮ ಮನಸ್ಸು ದೇವರ ಕಡೆಗೆ ತಿರುಗಿತ್ತೆಂಬುದನ್ನು ತಕ್ಕ ಫಲಗಳಿಂದ ತೋರಿಸಿರಿ" (ಲೂಕ 3:8ಎ) ಎಂದು ಹೇಳಿದನು. ಆತನ ಮನಸ್ಸಿನಲ್ಲಿ "ಫಲಗಳು" ಎಂಬುದು ಅವರ ಜೀವನದಲ್ಲಿ ಬದಲಾವಣೆಯ ಕುರಿತಾಗಿದೆ (ನೋಡಿ ಲೂಕ 3:10-14). "ನಿನೆವೆದವರು ... ಯೋನನು ಸಾರಿದ ವಾಕ್ಯವನ್ನು ಕೇಳಿ ದೇವರ ಕಡೆಗೆ ತಿರುಗಿಕೊಂಡರು" (ಮತ್ತಾಯ 12:41) ಎಂದು ಯೇಸು ಹೇಳಿದನು. ಅವರು ತಿರುಗಿಕೊಂಡರು ಎಂದು ನಮಗೆ ಹೇಗೆ ಗೊತ್ತಾಗುತ್ತದೆ? ಹೇಗೆಂದರೆ, "ಅವರು ತಮ್ಮ ದುರ್ಮಾರ್ಗದಿಂದ ತಿರುಗಿಕೊಂಡರು" (ಯೋನ 3:10).[13] ಒಂದು ವೇಳೆ ಒಬ್ಬನು ತನ್ನ ಪಾಪದ ಮಾರ್ಗದಿಂದ ತಿರುಗಿದನು ಎಂದು ಹೇಳ ಬಹುದು ಆದರೆ, ಅವನ ಜೀವನದಲ್ಲಿ ಬದಲಾವಣೆ ಕಾಣಿಸಿಕೊಳ್ಳದಿದ್ದರೆ ಜನರು ಬಹುಶಃ ನಿಜವಾಗಿಯು ಆತನು ತಿರುಗಿಕೊಂಡನೋ ಅಥವಾ ತಿರುಗಿಕೊಳ್ಳಲಿಲ್ಲವೋ ಎಂದು ಆಶ್ಚರ್ಯಪಡುತ್ತಾರೆ.

ಹೌದು, ಜೀವಿತದ ಬದಲಾವಣೆ "ಮಾನಸಾಂತರದ ಪ್ರಕ್ರಿಯೆಯಲ್ಲಿ" ಅವಶ್ಯಕವಾಗಿದೆ. ನಿಜವಾದ ಮಾನಸಾಂತರ ಇಂಥಹ ಬದಲಾವಣೆ ಉಂಟುಮಾಡುತ್ತದೆ.[14] ಹಾಗಿದ್ದರೂ, ಜೀವನದ ತಿದ್ದುಪಾಟು, ಅದಷ್ಟಕ್ಕೆ ಅದು, ಮಾನಸಾಂತರವಾಗುವದಿಲ್ಲ.

ಹಾಗಾದರೆ, ಒಂದು ಪ್ರಶ್ನೆ ಇಲ್ಲಿ ಬರುತ್ತದೆ, "ಪಾಪಕ್ಕಾಗಿ ದುಃಖ ಪಡುವುದು ಮಾನಸಾಂತರವಾಗದಿದ್ದರೆ ಮತ್ತು ಕೆಟ್ಟದನ್ನು ಮಾಡುವದರಿಂದ ತಿರುಗುವದು ಆಗಿರದಿದ್ದರೆ, ಹಾಗಾದರೆ ಅದು ಏನಾಗಿದೆ?" ಪದಪ್ರಯೋಗದ ಅಧ್ಯಯನವನ್ನು ನಾನು ಇಲ್ಲಿ ಸೇರಿಸುವದಕ್ಕೆ ಅವಕಾಶಕೊಡಿ:

> "ಮಾನಸಾಂತರ" ಎಂದು ಭಾಷಾಂತರಿಸಿದ ಈ ಪದವು ಗ್ರೀಕಿನ ಸಂಯುಕ್ತ ಪದ ವಾಗಿದೆ *(metanoeo)*, ಇದು "ನಂತರ" *(meta)* ಎನ್ನುವ ಶಬ್ದವನ್ನು "ಆಲೋಚನೆ" *(noema)* ಎನ್ನುವ ಶಬ್ದದೊಂದಿಗೆ ಸೇರಿಸಿದೆ. ಇದರ ಶಬ್ದಾರ್ಥ "ನಂತರ - ಆಲೋಚನೆ" ಮತ್ತು ಒಬ್ಬನು ಬದಲಾಯಿಸಿಕೊಂಡ ಆಲೋಚನೆಯನ್ನು ಸೂಚಿಸುತ್ತದೆ. ಇದನ್ನು ಮನುಷ್ಯರಿಗೆ ಅಳವಡಿಸಿದಾಗ, ಮಾನಸಾಂತರವೆಂಬುದು ಸಾಮಾನ್ಯವಾಗಿ "ಪಾಪದ ಕುರಿತ ಮನಸ್ಸು ಬದಲಾವಣೆ" - ಸಾಮಾನ್ಯವಾಗಿ ಪಾಪ ಮಾಡುವದನ್ನು ನಿಲ್ಲಿಸಲು ಮತ್ತು/ಅಥವಾ ನಿರ್ಧಿಷ್ಟವಾದ ಪಾಪ ಮಾಡುವದನ್ನು ನಿಲ್ಲಿಸುವುದನ್ನು ನಿರ್ಧರಿಸುವುದಾಗಿದೆ.[15]

"ಮಾನಸಾಂತರ ಪ್ರಕ್ರಿಯೆ" ಕುರಿತು ನಾವು ಪುನರ್ಪರಿಶೀಲಿಸೋಣ. ದೈವೀಕ ದುಃಖವು ಮಾನಸಾಂತರವನ್ನು ಉಂಟುಮಾಡುತ್ತದೆ, ಇದು ಮನಸ್ಸು ಅಥವಾ *ಭಾವನೆಯನ್ನು ಬದಲಾಯಿಸುವದು* ಆಗಿರುತ್ತದೆ. ಆ *ಮನಸ್ಸಿನ ಬದಲಾವಣೆಗೆ,*[16] ಅವಶ್ಯಕವಾಗಿ, ಜೀವನ ಬದಲಾವಣೆ ಫಲಿತವಾಗಿ ಬರುತ್ತದೆ. ಯೇಸು ಈ ಪ್ರಕ್ರಿಯೆಯನ್ನು ಉದಾಹರಿಸುವ ಒಂದು ಕಥೆಯನ್ನು ಹೇಳಿದನು.[17] ತನ್ನ ಮಕ್ಕಳಲ್ಲಿ ಒಬ್ಬನ ಹತ್ತಿರ ಹೋಗಿ "ಮಗನೇ ಹೋಗಿ ಈ ಹೊತ್ತು ದ್ರಾಕ್ಷೇ ತೋಟದಲ್ಲಿ ಕೆಲಸ ಮಾಡು" (ವಚನ 28) ಎಂದು ಹೇಳಿದ ಒಬ್ಬ ಮನುಷ್ಯನ ಕುರಿತು ಯೇಸು ಮತ್ತಾಯ 21ರಲ್ಲಿ ಹೇಳಿದನು. ಅದಕ್ಕೆ ಮಗನು "ನಾನು ಹೋಗುವದಿಲ್ಲ" (ವಚನ 29) ಎಂದು ಹೇಳಿದನು - ಆದರೆ "ತರುವಾಯ *ಪಶ್ಚಾತ್ತಾಪಪಟ್ಟು* ತೋಟಕ್ಕೆ" ಹೋದನು (ವಚನ 29ಬಿ; ಒತ್ತಿ ಹೇಳಿದ್ದು ನನ್ನದು). KJVಯಲ್ಲಿ ಹೀಗೆ ಬರೆದಿದೆ, "ತರುವಾಯ ಅವನು ಪಶ್ಚಾತ್ತಾಪಪಟ್ಟನು ಮತ್ತು ಹೋದನು." NIVಯಲ್ಲಿ ನಂತರ, "*ಅವನು ತನ್ನ ಮನಸ್ಸನ್ನು ಬದಲಾಯಿಸಿಕೊಂಡನು* ಮತ್ತು ಹೋದನು"[18] (ಒತ್ತಿ ಹೇಳಿದ್ದು ನನ್ನದು).[19]

"ಶರಣಾಗುವದು" ಎಂಬ ಶಬ್ದ ಮಾನಸಾಂತರ ಕುರಿತು ಶ್ರೇಷ್ಠ ಸಾರಾಂಶವನ್ನು ಕೊಡುವ ಪದವಾಗಿದೆ ಎಂದು Allen ಅವರು ಸೂಚಿಸಿದ್ದಾರೆ:

> ನೀನು ನಿನ್ನ ಸ್ವಾರ್ಥ ಮಹಾತ್ವಾಕಾಂಕ್ಷೆಗಾಗಿ, ಹೆಬ್ಬಯಕೆಗಾಗಿ ಮತ್ತು ಜೀವನದ ಗುರಿಗಾಗಿ ನೀನು ಸಾಯಬೇಕು. ನಿನಗಿರುವುದೆಲ್ಲನ್ನು ತೆಗೆದಕೋ, ಸದ್ಯದಲ್ಲಿ ನಿನಗಿರುವ ಸ್ವತ್ತು, ಸಂಪತ್ತು ಮತ್ತು ಮುಂದೆ ಬರುವ ಎಲ್ಲಾ ಸ್ವತ್ತು ಸಂಪತ್ತೆಲ್ಲವನ್ನೂ ಸರ್ವಶಕ್ತನಿಗೆ ಬಲಪೀಠದ ಮೇಲೆ ಬಲಿ ಅರ್ಪಿಸಬೇಕು. ನಿನ್ನ ದಂಗೆ ಆಯುಧಗಳೆಲ್ಲವನ್ನೂ ಒಟ್ಟುಗೂಡಿಸಿ [ನಿನ್ನ ಆಯಧಗಳು] ನೀನು ದೇವರಿಗೆ ಶರಣನಾಗು.[20]

## "... ನೀವೆಲ್ಲರೂ ಅವರಂತೆ ಹಾಳಾಗುವಿರಿ"

### ಸಾರ್ವತ್ರಿಕ ಪರಿಣಾಮ

ನಾವು ದೇವರಿಗೆ ಶರಣಾದರೆ ನಿಜವಾಗಲು ಈ ಘಟನೆ ನಡೆಯುವದೋ? ನಮ್ಮ ಪಾಪಗಳಿಗೆ ಮಾನಸಾಂತರಪಡುವುದಿಲ್ಲವೆಂದು ನಿರ್ಧಾರ ಮಾಡಿದಾಗ ನಮಗೆ ಏನಾಗುತ್ತದೆ? ಯೇಸುವಿನ ಕೊನೆಯ ಮಾತನ್ನು ನೋಡಿರಿ: "ಹಾಗೆ ಭಾವಿಸಕೂಡದೆಂದು ನಾನು ನಿಮಗೆ ಹೇಳುತ್ತೇನೆ, ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ, *ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ*" (ಲೂಕ 13:3; ಒತ್ತಿ ಹೇಳಿದ್ದು ನನ್ನದು). "ಎಲ್ಲರೂ" ಎಂಬ ಪದವನ್ನು ಗಮನಿಸಿರಿ. ಪೀಲಾತನು ಕೊಲೆಮಾಡಿದ ಗಲಿಲಾಯದವರ ಪಾಪಗಳಷ್ಟು ಕೆಟ್ಟದ್ದಾಗಿಲ್ಲವೆಂದು ಯೇಸುವಿನ ಕೇಳುಗರರು ತಮ್ಮ ಪಾಪಗಳ ಬಗ್ಗೆ ಆಲೋಚಿಸಿದರು. ಹೇಗಿದ್ದರೂ, ಸಹ ತಮ್ಮ ಪಾಪಗಳು ಪಾಪವೇ ಆಗಿವೆ, ಮತ್ತು ಎಲ್ಲಾ ಪಾಪಗಳು ದೇವರನ್ನು[21] ಬಹಿರಂಗವಾಗಿ ಅಪಮಾನ ಮಾಡುತ್ತವೆಂದು ಅವರು ತಿಳಿದುಕೊಳ್ಳಬೇಕೆಂದು ಯೇಸು ಬಯಸಿದರು.

"*ಎಲ್ಲರೂ* ಪಾಪ ಮಾಡಿದ್ದಾರೆ" (ರೋಮಾಪುರ 3:23; ಒತ್ತಿ ಹೇಳಿದ್ದು ನನ್ನದು); ಆದುದರಿಂದ, ಎಲ್ಲರೂ ಪಶ್ಚಾತ್ತಾಪಪಡಬೇಕು, ಕ್ರೈಸ್ತರಾಗುವದಕ್ಕೆ ಮಾನಸಾಂತರಪಡುವುದು ಅವಶ್ಯಕವಾಗಿದೆ (ಅಪೊಸ್ತಲರ ಕೃತ್ಯಗಳು 2:38; 3:19), ಮತ್ತು ಅದು ನಂಬಿಗಸ್ತನಾದ ಕ್ರೈಸ್ತನಾಗಿ ಇರುವದಕ್ಕೆ ಅವಶ್ಯಕವಾಗಿದೆ (ಅಪೊಸ್ತಲರ ಕೃತ್ಯಗಳು 8:22; 2 ಕೊರಿಂಥ 7:9, 10; ಇಬ್ರಿಯ 6:6).[22] ಪೌಲನು ಹೀಗೆ ಹೇಳಿದ್ದಾನೆ, "*ಮನುಷ್ಯರೆಲ್ಲರೂ* ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆ ಕೊಡುತ್ತಾನೆ" (ಅಪೊಸ್ತಲರ ಕೃತ್ಯಗಳು 17:30; ಒತ್ತಿ ಹೇಳಿದ್ದು ನನ್ನದು).

### ಮುಗಿಯದ ಪರಿಣಾಮ

ಒಬ್ಬನು ದೇವರಿಗೆ ವಿಧೇಯನಾಗಲು ಇಷ್ಟಪಡದಿದ್ದರೆ ಏನಾಗುತ್ತದೆ? "ನೀವು *ದೇವರ* ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗಿ ಹೋಗುವಿರಿ" (ಲೂಕ 13:3, 5; ಒತ್ತಿ ಹೇಳಿದ್ದು ನನ್ನದು) ಎಂದು ಯೇಸು ಸರಳವಾಗಿ ಹೇಳಿದ್ದಾನೆ. ಅವರು ಮಾನಸಾಂತರಪಡದಿದ್ದರೆ ಗೋಪುರವೇ ಅವರ ಮೇಲೆ ಬಿದ್ದು ಹೋಗುವುದು ಅಥವಾ ಪಿಲಾತನು ಅವರನ್ನು ಕೊಲ್ಲುವನು ಎಂದು ತನ್ನ ಶ್ರೋತೃಗಳಿಗೆ ಯೇಸು ಹೇಳುತ್ತಿದ್ದಾನೆಂದು ನನಗೆ ಸಂಶಯವಾಗುತ್ತದೆ. ನಿಜವಾಗಿಯು ಅವರು ಆತ್ಮೀಕ ಪರಿಣಾಮವನ್ನು ಹೊಂದುವರೆಂದು ಕರ್ತನ ಮನಸ್ಸಿನಲ್ಲಿತ್ತು. "ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ. ಆತ್ಮ ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೆ ಹೆದರಿರಿ" (ಮತ್ತಾಯ 10:28) ಎಂದು ಕ್ರಿಸ್ತನು ಮತ್ತೊಂದು ಕಡೆಯಲ್ಲಿ ಹೇಳಿದ್ದಾನೆ.

ಕಳೆದ ದಿನಗಳಲ್ಲಿ, ದೇವರು ಜನರ ಹೃದಯದೊಳಗೆ ಆತ್ಮೀಕ ಅಂತಃಪ್ರೇರಣೆಯನ್ನು ಕಳುಹಿಸಿ ಅವರು ಮಾನಸಾಂತರಪಡುವಂತೆ ಒತ್ತಾಯಿಸುವರು ಎಂದು ಪ್ರಸಿದ್ಧವಾದ ಒಂದು ಸಿದ್ಧಾಂತವು ಹೇಳತ್ತದೆ.[23] ಇದು ನಿಜವಾಗಿದ್ದರೆ, ಎಲ್ಲರು ಮಾನಸಾಂತರಪಡುತ್ತಿದ್ದರು - ಏಕೆಂದರೆ "ದೇವರು ಪಕ್ಷಪಾತಿಯಲ್ಲ" (ಅಪೊಸ್ತಲರ ಕೃತ್ಯಗಳ 10:34). "*ಯಾವನಾದರೂ*

ನಾಶವಾಗುವದರಲ್ಲಿ ಆತನು ಇಷ್ಟಪಡದೆ *ಎಲ್ಲರೂ* ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು" ಆತನು ಅಪೇಕ್ಷಿಸಿದ್ದಾನೆ (2 ಪೇತ್ರ 3:9; ಒತ್ತಿ ಹೇಳಿದ್ದು ನನ್ನದು). ನಾವೆಲ್ಲರು ಪಶ್ಚಾತ್ತಾಪ ಪಡಬೇಕೆಂದು ದೇವರು ಬಯಸುತ್ತಾನೆ. ಆದರೆ ನಿರ್ಧಾರ ಮಾಡುವದು *ನಮ್ಮದು.* ಮಾನಸಾಂತರಪಡುವುದಕ್ಕಾಗಿ ಪ್ರೋತ್ಸಾಹಿಸಲು, ಕರ್ತನು ಎರಡು ಮುಖ್ಯವಾದ ಪ್ರಚೋದನೆಗಳನ್ನು ಉಪಯೋಗಿಸಿದ್ದಾನೆ.

ಮೊದಲನೆಯದಾಗಿ *ಆತನ ಒಳ್ಳೆಯತನದ ಒಂದು ಕಥೆ.* ಪೌಲನು ಹೀಗೆ ಬರೆಯುತ್ತಾನೆ, "ಆತನ ಅಪಾರವಾದ ದಯಾ ಸಹನೆ ದೀರ್ಘಶಾಂತಿಗಳನ್ನು ಅಸಡ್ಡೆ ಮಾಡುತ್ತಿಯಾ? ಮನಸ್ಸನ್ನು ಬೇರೆ ಮಾಡಿಕೊಳ್ಳುವದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರೇಪಿಸುತ್ತಾನೆಂಬದನ್ನು ನಿನಗೆ ಗೊತ್ತಿಲ್ಲವೇ?" (ರೋಮಾಪುರ 2:4). J. W. McGarvey ಅವರು ಹೀಗೆ ಬರೆದಿದ್ದಾರೆ.

> ದೇವರನ್ನು ತಿಳಿದಿರುವ, ಹೊಸ ಒಡಂಬಡಿಕೆಯ ಪ್ರಕಟಣೆಗಳನ್ನು ಪರಿಚಯ ಹೊಂದಿರುವ, ಕುಳಿತುಕೊಂಡು ತನ್ನನ್ನೇ ಉಂಟುಮಾಡಿದ ದೇವರ ಕರುಣೆಯ ಬಗ್ಗೆ ಪ್ರತಿಬಿಂಬಿಸಿದ ಪಾಪಿಯು; ಪ್ರಾರಂಭದಿಂದಲೂ ತನ್ನ ಮೇಲೆ ಎಲ್ಲಾ ಸಮಯಗಳಲ್ಲಿ ದೇವರು ಸುರಿಸುವ ಕೃಪಾಕರುಣೆಯನ್ನು ಜ್ಞಾಪಿಸಿಕೊಂಡವನು; ದೇವರು ತನ್ನ ರಕ್ಷಣೆಗಾಗಿ ಮಾರ್ಗವನ್ನು ಕೊಟ್ಟಿರುವನೆಂಬ ನಿಜಾಂಶದ ಮೇಲೆ; ಪಾಪಿಯಾದವನು ದಿನಪ್ರತಿ ತನ್ನ ಪಾಪಗಳಿಂದ ದೂರವಿದ್ದು ಪ್ರತಿದಿನ ಕ್ರಿಸ್ತನಲ್ಲಿ ಕೊಡುವ ಶಾಂತಿ ಸಮಾಧಾನ ಹೊಂದಲು ಬರಬೇಕು; ಆತನು ನಿತ್ಯತ್ವದ ಬಾಗಿಲನ್ನು ತೆರೆಯುವನು, ಮಹಿಮೆಯುಳ್ಳ ನಿತ್ಯತ್ವವು, ಮತ್ತು ಪರಮಾನಂದ ಮತ್ತು ಗೌರವ ಅವೆಲ್ಲವನ್ನು - ಪಾಪಿಯಾಗಿದ್ದದಕ್ಕೆ ತನ್ನನ್ನು ತಾನೇ ಉಪೇಕ್ಷಿಸಿಕೊಳ್ಳದೆ ಒಬ್ಬನು ಹೀಗೆ ಪ್ರತಿಬಿಂಬಿಸಲು ಸಾಧ್ಯವಿದೆಯೋ?[24]

ಹಾಗಿದ್ದರೂ, ಮನುಷ್ಯನು ಹಿಂತಿರುಗಿ ಬರುವದಕ್ಕಾಗಿ, ದೇವರು ದುಃಖಕರವಾದ ತನ್ನ *ಕೋಪದ ಸತ್ಯವನ್ನು* ಬಳಸುವನು. "ದೇವರ ಕರುಣೆಯು ಅವರನ್ನು ತಿರುಗುವಿಕೆಗೆ ನಡಿಸಿತು," ಎಂದು ರೋಮಾಯದವರಿಗೆ ಪೌಲನು ಹೇಳಿದ ನಂತರ ಆತನು ಹೀಗೆ ಬರೆದನು.

> ನಿನ್ನ ಮೊಂಡತನವನ್ನೂ ಪಶ್ಚಾತ್ತಾಪವಿಲ್ಲದ ಮನಸ್ಸನ್ನೂ ಅನುಸರಿಸುವದರಿಂದ ನಿನಗೋಸ್ಕರ ದೇವರ ಕೋಪವನ್ನು ಕೂಡಿಟ್ಟುಕೊಳ್ಳುತ್ತಾ ಇದ್ದೀ. ದೇವರ ಕೋಪವು ನ್ಯಾಯವಾದ ತೀರ್ಪು ಪ್ರಕಟವಾಗುವ ದಿವಸ ಬರುತ್ತದಷ್ಟೆ. ಆತನು ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು (ರೋಮಾಪುರ 2:5, 6).

ಯೇಸು ಈ ರೀತಿಯಲ್ಲಿ ತನ್ನನ್ನು ಹಿಂಬಾಲಿಸುವವರಿಗೆ ನಾಶವಾಗುವದರ ಕುರಿತಾಗಿ ಎಚ್ಚರಿಸುತ್ತಾ ಪ್ರೇರೇಪಿಸಿ ಪ್ರೋತ್ಸಾಹಿಸಿದನು. ನಾವು ನಮ್ಮ ಜನರಿಗೆ ಎಂದೂ ಕೂಡ ನರಕದ ಬಗ್ಗೆ ಹೇಳಿ ಅವರನ್ನು "ಎದುರಿಸಬಾರದೆಂದು" ಕೆಲವರು ಆಲೋಚಿಸುತ್ತಾರೆ. ನೀನು ಆ ರೀತಿ ಆಲೋಚಿಸಿದರೆ, ಇದನ್ನು ಪರಿಗಣಿಸಿರಿ: ಎಲ್ಲಾ ದೊಡ್ಡ ದೊಡ್ಡ ಸೇವಕರಿಗಿಂತ ಹೆಚ್ಚಾಗಿ ನರಕದ ಕುರಿತು ಹೇಳಲು ಯೇಸು ಕ್ರಿಸ್ತನಿಗೆ ಹೆಚ್ಚಾದ ವಿಷಯಗಳುಂಟು. ನಾವು ನಮ್ಮ ಅವಿಧೇಯತೆಯಿಂದ ಉಂಟಾಗುವ ಪರಿಣಾಮಗಳನ್ನು ಆಲೋಚಿಸಲು ಇಷ್ಟಪಡುವದಿಲ್ಲ, ಆದರೂ ನಾವು ಆಲೋಚನೆ ಮಾಡಲೇಬೇಕು!

## ಮುಕ್ತಾಯ

ಸಿದ್ಧವಾಗಿರುವ ಜನರಿಗಾಗಿ ಪರಲೋಕವು ಸಿದ್ಧಮಾಡಲ್ಪಟ್ಟ ಸ್ಥಳವಾಗಿದೆ.[25] ಮತ್ತು ಅದರಂತೆ ನರಕವು[26] ಸಹ ಆಗಿರುತ್ತದೆ. ಈಗಲೇ, ನೀವು ಒಂದಕ್ಕಾಗಿಯೋ

ಅಥವಾ ಇನ್ನೊಂದಕ್ಕಾಗಿಯೋ ಸಿದ್ಧರಾಗಿದ್ದಿರಿ. ನೀವು ಪರಲೋಕಕ್ಕೆ ಹೋಗಲು ಸಿದ್ಧರಾಗಿದ್ದಿರಾ - ಅಥವಾ ನಿಮ್ಮ ಹೃದಯದಲ್ಲಿ ಮತ್ತು ಜೀವನದಲ್ಲಿ ಪಾಪಗಳಿಂದ ತಿರುಗುವದು ಅವಶ್ಯವಾಗಿದೆಯಾ?

ಯೇಸು ಒಂದು ಪಟ್ಟಣದ ನಾಗರೀಕರನ್ನು ಹೀಗೆ ಗದರಿಸಿ ಹೇಳಿದನು, "... ಆದರೆ ನ್ಯಾಯವಿಚಾರಣೆಯ ದಿನದಲ್ಲಿ ನಿನ್ನ ಗತಿಗಿಂತಲೂ ಸೊದೋಮ್ ಸೀಮೆಯ ಗತಿಯು ಮೇಲಾಗಿರುವದು" (ಮತ್ತಾಯ 11:24). ಯಾಕೆ? ಯಾಕೆಂದರೆ, ಸೊದೋಮ್ ಗೋಮಾರದಲ್ಲಿಯ ಜನರಿಗಿಂತಲು ಯೇಸುವಿನಿಂದ ಬೋಧಿಸಲ್ಪಟ್ಟ ಜನರಿಗೆ ಮಾನಸಾಂತರಪಡಲು ಹೆಚ್ಚಿನ ಅವಕಾಶಗಳು ಇವೆ - ಆದರೂ ಸಹ, ಅವರು ಆ ಅವಕಾಶಗಳನ್ನು ನಿರಾಕರಿಸಿದರು. ನೀನು ಇದನ್ನು ಅರಿತುಕೊಳ್ಳುತ್ತಿಲ್ಲ, ಆದರೆ ಇಂದು ನೀನು ಭಯಂಕರವಾದ ಸ್ಥಳದಲ್ಲಿ ಕುಳಿತುಕೊಂಡಿದ್ದಿ, ಯೇಸು ಕೊಟ್ಟಿರುವ ಆಯ್ಕೆಗಳನ್ನು ನೀನು ಕಲಿಯುವ ಅವಕಾಶ ನಿನಗೆ ಕೊಡಲ್ಪಟ್ಟಿದೆ. ನೀವು ಮಾನಸಾಂತರಪಡದಿದ್ದರೆ - ನೀವು ನಾಶನವಾಗುವಿರಿ - ನಿಮ್ಮನ್ನು ಕ್ಷಮಿಸುವ ಅವಕಾಶವಿಲ್ಲ.

"ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ನಾನು ಅವಳಿಗೆ ಸಮಯವನ್ನು ಕೊಟ್ಟೆನು, ಆದರೆ ದೇವರ ಕಡೆಗೆ ತಿರುಗಿಕೊಂಡು ತನ್ನ ಜಾರತ್ವವನ್ನು ಬಿಟ್ಟು ಬಿಡುವದಕ್ಕೆ ಅವಳಿಗೆ ಇಷ್ಟವಿಲ್ಲ" (ಪ್ರಕಟಣೆ 2:21) ಎಂದು ಕರ್ತನು ಒಬ್ಬಳ ಕುರಿತು ಹೇಳಿದನು. ಈಗಲೇ, ದೇವರು ನಿನಗೆ "ಮಾನಸಾಂತರಪಡುವದಕ್ಕೆ" "ಸಮಯ"ವನ್ನು ಕೊಡುತ್ತಿದ್ದಾನೆ. "ಅವನು [ಅವಳು] ಮಾನಸಾಂತರಪಡುವದಕ್ಕೆ ಇಷ್ಟವಿಲ್ಲ" ಎಂದು ನಿನ್ನ ಬಗ್ಗೆ ಹೇಳಬಾರದೆಂದು ನಾನು ಪ್ರಾರ್ಥಿಸುತ್ತೇನೆ. ನೀನು ಪ್ರತಿಕ್ರಿಯಿಸುವುದಾದರೆ *ಈ ದಿನವೇ* ಮಾನಸಾಂತರಪಡು.[27]

## ಗಮನಿಸು

ಪ್ರಾರಂಭದ ಈ ಸರಣಿಯಲ್ಲಿ, ಬಹುಶಃ ಈ ಪಶ್ಚಾತ್ತಾಪದ ಪ್ರಸಂಗಕ್ಕಿಂತ ಬೇರೆ ಪ್ರಸಂಗಗಳು ಅತ್ಯಾವಶ್ಯಕವಾಗಿ ಬೇಕಾಗಿರುವದಿಲ್ಲ ಎಂದು ನಾನು ಸೂಚಿಸಿದ್ದೇನೆ (ಲೂಕ 13:1-5). ಆ ಅಂಶದ ಮೇಲಿನ ಪ್ರಸಂಗ ಇದೇ ಆಗಿದೆ. ಈ ವರ್ಣನೆಯು ಒಂಟಿಯಾಗಿ ನಿಂತಿದೆ, ಅಥವಾ ರಕ್ಷಣೆಯ ಶರತ್ತುಗಳ ಕುರಿತ ಪ್ರಸಂಗಗಳ ಸರಣಿಯಲ್ಲಿ ಇದನ್ನು ಉಪಯೋಗಿಸಬಹುದು.

---

ಟಿಪ್ಪಣೆಗಳು

[1]ಗಲಿಲಾಯದವರು ಯಾರು ಎನ್ನುವ ಸಾಧ್ಯತೆಗಳು ಎನ್ನುವ ವಿಷಯವನ್ನು "ಪೊಂತಿ ಪಿಲಾತನು" ಮತ್ತು ಯೇಸುವಿನ ಮರಣ ಎನ್ನುವ ಅಧ್ಯಾಯದಲ್ಲಿ ಇದನ್ನು *ಕ್ರಿಸ್ತನ ಜೀವನ ಚರಿತ್ರೆ, 6ರಲ್ಲಿ* ಕಂಡು ಬರುತ್ತದೆ. [2]ಲೂಕ 13:1-5ರ ಚರ್ಚೆಗಾಗಿ "ಹೊಸ ಮತ್ತು ಹಳೆಯ ವಿಷಯಗಳು" ಎನ್ನುವ ಅಧ್ಯಾಯದಲ್ಲಿ ಇದನ್ನು *ಕ್ರಿಸ್ತನ ಜೀವನ ಚರಿತ್ರೆ, 4ರಲ್ಲಿ* ಕಂಡುಕೊಳ್ಳುತ್ತೇವೆ. [3]ಇಲ್ಲಿ ಎರಡು ಇತರೆ ಭಾಗಗಳು ಜ್ಞಾನೋಕ್ತಿ 14:12 ಮತ್ತು 16:25. [4]ಉದಾಹರಣೆಗೆ ನೋಡಿರಿ 1 ಅರಸು 8:47; ಯೆಹೆಜ್ಕೇಲ 14:6; 18:30 ಇತರ ಉದಾಹರಣೆಯನ್ನು ನೋಡಿರಿ. [5]ಮಹಾ ನಿಯೋಗದಲ್ಲಿ ಲೂಕ 24:47 ಪುನರಾವರ್ತನೆಯಾಗಿದೆ. "ವಿದಾಯ ಮತ್ತು ಅಭಿನಂದನೆ" ಎನ್ನುವ ಅಧ್ಯಾಯದಲ್ಲಿ ಕಂಡುಕೊಳ್ಳುತ್ತೇವೆ. [6]ದೇವರು ಮತ್ತು ಯೇಸುವಿನ ಕುರಿತು ಅವರಿಗೆ ಇರುವ ನಂಬಿಕೆಯು ಸರಿಯಾದ ನಂಬಿಕೆ ಎಂದು ಹೇಳುವದಕ್ಕಾಗಿ ಅಲ್ಲ, ಆದರೆ ಅವರು ದೇವರ ಮತ್ತು ಯೇಸುವಿನ ಇರುವಿಕೆಯನ್ನು ದೇವಕುಮಾರನು ಎಂದು ನಂಬುವಂತಾಗಲು ಆಗಿರುತ್ತದೆ. [7]ಹೆಮ್ಮೆಯು, ಒಂದು ಪಾಪ ಎಂದು ಕೆಲವು ಸಂಬಂಧಿಸಿದ ಭಾಗಗಳು ಇಲ್ಲಿವೆ ಜ್ಞಾನೋಕ್ತಿ 16:18; 29:23; 1 ಯೋಹಾನ 2:16. [8]J. W. McGarvey, *Sermons* (Cincinnati: Standard Publishing Co., 1893; reprint, n.d.), 97. [9]ಧಾರ್ಮಿಕರಲ್ಲದ ಜನರನ್ನು "ತಿರುಗುವಿಕೆ" ಕುರಿತು ಕೇಳಿದರೆ ಅವರಲ್ಲಿ ಅನೇಕರಲ್ಲಿ ಉತ್ತರವಿಲ್ಲ. [10]ಅನೇಕ ದೃಷ್ಟಾಂತಗಳು ಇಲ್ಲಿ ಉಪಯೋಗಿಸಿದೆ. ಕೈದಿಗಳು ಹಿಡಿಯಲ್ಪಡುವಾಗ ಅವರು ಕ್ಷಮೆ ಕೇಳವವರಾಗಿದ್ದಾರೆ. ಅವರು ಹೊರಗೆ ಬರುವಾ ತಿರುಗಿ ತಮ್ಮ ಅಪರಾದ ಕೃತ್ಯಗಳು ಪ್ರಾರಂಭಮಾಡುತ್ತಾರೆ. ಕುಡುಕರು ಬೆಳಿಗ್ಗೆ ಮತ್ತು ಸಾಯಂಕಾಲದಲ್ಲಿ ಕ್ಷಮೆ ಕೇಳುವವರಾಗಿದ್ದಾರೆ.

ಅವರ ಕೃತ್ಯಗಳ ಪರಿಣಾಮಗಳನ್ನು ನೋಡುತ್ತಾರೆ, ಆದರೆ ಅವರಿಗೆ ಅನೇಕ ಅವಕಾಶಗಳು ಬಂದಾಗ್ಯೂ ಅನೇಕರು ಮತ್ತೇ ಕುಡಿಯಲು ಪ್ರಾರಂಭಿಸುತ್ತಾರೆ.

[11]Jimmy Allen, "Repentance," *What Is Hell Like? and Other Sermons* (Dallas: Christian Publishing Co., 1965), 164. [12]ಎರಡು ವಿವರಣೆಗಳು ಕೆಲವು ಸಾರಿ ಒಂದೇ ಮಾಡಲಾಗಿದೆ. "ತಿರುಗಿಕೊಳ್ಳುವಿಕೆ" ಅರ್ಥವು ನೀವು ಮಾಡಿದ ಪಾಪಕ್ಕೆ ಕ್ಷಮೆ ಕೇಳುವದು ಆಗಿದೆ ಅದೇ ರೀತಿಯಲ್ಲಿ ಪಾಪಮಾಡುವದನ್ನು ನಿಲ್ಲಿಸು ಮತ್ತು ಒಳ್ಳೆಯದನ್ನು ಮಾಡಲು ಪ್ರಾರಂಭಿಸು. [13]ಇತರ ಉದಾಹರಣೆಗಳು ಇಲ್ಲಿ ಕೊಡಲ್ಪಟ್ಟಿದ್ದೇವೆ. ಜನರು ತಮ್ಮ ಕಾರ್ಯಗಳಿಂದ ಅವರು ತೋರಿಸಿದ್ದಾರೆ ಅವರು ತಿರುಗಿಕೊಂಡಿದ್ದೇವೆಂದು ಜಕ್ಕಾಯನು ಮತ್ತು ಸೆರಮನೆ ಅಧಿಕಾರಿಯು ಸಹ ಇದನ್ನು ತೋರಿಸಿದ್ದಾರೆ. [14]ನಿನಗೆ ಒತ್ತಿ ಹೇಳಬೇಕಾಗಬಹುದು, ಜೀವನದಲ್ಲಿ ಬದಲಾವಣೆ ಮಾಡಿಕೊಡಲು ಪುನ (ಸಮರ್ಪಿಸಿ) ಒಪ್ಪಿಸಿಕೊಡುವದು ಅವಶ್ಯವಾಗಿದೆ. ಉದಾಹರಣೆಗೆ, ಒಂದು ವೇಳೆ ಒಬ್ಬ ಮನುಷ್ಯನು ಹಂದಿಯನ್ನು ಕಳ್ಳತನ ಮಾಡಿದರೆ ಅವನು ಅದನ್ನು ನಿಜವಾದ ಯಜಮಾನನಿಗೆ ಹಿಂದಕ್ಕೆ ಕೊಡಬೇಕು, ಒಂದು ವೇಳೆ ಅವನು ಆ ಹಂದಿಯನ್ನು ತಿಂದು ಮುಗಿಸಿದ್ದರೆ ಅದರ ಬೆಲೆಯನ್ನು ಅದರ ಯಜಮಾನನಿಗೆ ಕೊಡಬೇಕು. [15]"Acts, 1," *Truth for Today* (May 1995): 54 ರಲ್ಲಿ ಕ್ಲಿಷ್ಟಪದ ಕೋಶದಿಂದ ಮಾರ್ಪಡಿಸಲಾಗಿದೆ. [16]ಒಂದು ನಿಯಮ ಮಾತ್ರ ಇಡಿ ಜೀವನವನ್ನೆ ಬದಲಾಯಿಸುತ್ತದೆ ಎನ್ನುವಂಥದರಲ್ಲ ತಿರುಗುವಿಕೆಗೆ ಅಷ್ಟು ಸಾಕು ಎನ್ನುವಂಥದಲ್ಲ, ಆದರೆ ಕೆಲವು ಬದಲಾವಣೆ ಅವಶ್ಯವಾಗಿರಬೇಕಾಗುತ್ತದೆ. ಈ ಬದಲಾವಣೆಯ ಕಾರ್ಯ ಜೀವನ ಪೂರ್ತಿ ನಡೆಯುತ್ತಿರುತ್ತದೆ. [17]ಇತರ ಸತ್ಯವೇದ ದೃಷ್ಟಾಂತಗಳನ್ನು ಉಪಯೋಗಿಸಲಾಗಿದೆ ಉದಾಹರಣೆಗೆ "ತಪ್ಪಿಹೋದ ಮಗನ ಕಥೆ" (ನೋಡಿರಿ ಲೂಕ 15:17, 18). [18]ಗ್ರೀಕ್ ಶಬ್ದವು NASB ತರ್ಜುಮೆ "ಪಶ್ಚಾತ್ತಾಪ" ಎಂದು KJV ತರ್ಜುಮೆ "ತಿರುಗು" ಎಂದು NIV ತರ್ಜುಮೆ "ತನ್ನ ಮನಸ್ಸನ್ನು ಬದಲಾಯಿಸು" ಎಂದು ಹೀಗೆ ಇವೆಲ್ಲವು "ತಿರುಗುವಿಕೆಗೆ" ಉಪಯೋಗಿಸುವ ಶಬ್ದಗಳು ಆದರೆ ಸಂಬಂಧಿಸಿದ ಶಬ್ದಗಳಾಗಿವೆ. [19]ಕೆಲವು ಬೋಧಕರು "ತಿರುಗುವಿಕೆ" ಕುರಿತು ಹೀಗೆ ಬೋಧಿಸುತ್ತಾರೆ, ಅವರು ದಿಕ್ಕಿಗೆ ನಡೆದುಕೊಂಡು ಹೋಗಿ ಹೀಗೆ ಹೇಳುತ್ತಾರೆ, "ನಮ್ಮ ಜೀವನದ ಪ್ರಾರಂಭದಲ್ಲಿ ನಾವು ಅಲ್ಲಿಗೆ ಮುಟ್ಟುವದಕ್ಕಿಂತ ಮೊದಲು, ದೇವರ ಕಡೆಗೆ ನಡೆಯುತ್ತೇವೆ." ಅದೆಲ್ಲವನ್ನು ನಾವು ಲೆಕ್ಕಕೊಡಬೇಕು. ಅವರು ಮತ್ತೇ ನಿಂತು 180 ಡಿಗ್ರಿಯಲ್ಲಿ ನಿಂತು ಹೇಳುತ್ತಾರೆ, "ನಂತರ ನಮಗೆ ವಯಸ್ಸಾಗುತ್ತೆ ನಾವು ಪಾಪ ಮಾಡಲು ಪ್ರಾರಂಭಿಸುತ್ತೇವೆ ಮತ್ತು ದೇವರಿಂದ ಬೇರೆ ಕಡೆ ತಿರುಗುತ್ತೇವೆ." ಅವರು ಮತ್ತೇ ಇನ್ನೊಂದು ದಿಕ್ಕಿನಲ್ಲಿ ಸ್ವಲ್ಪ ದೂರ ಹೋಗುತ್ತಾರೆ. ಸಮಾನ್ಯವಾಗಿ ಮಾತಾಡಿ ಪಾಪವು ಜನರ ಜೀವಿತದಲ್ಲಿ ಬರುವದನ್ನು ಹೇಳುತ್ತಾರೆ. ಅವರು ನಿಲ್ಲಿಸಿ ಮತ್ತು ಹೇಳುತ್ತಾರೆ, "ಆದರೆ ನಮ್ಮಲ್ಲಿ ಕೆಲವರು ನಮ್ಮ *ಪಾಪಗಳಿಂದ* ತಿರುಗಬೇಕು." ಅದರ ಅರ್ಥವೇನೆಂದರೆ ಕೆಲವರ ತಪ್ಪುಗಳನ್ನು ನೋಡಿದ್ದೇವೆ, ಅವರು *ಬದಲಾಯಿಸಿಕೊಳ್ಳಲು* ನಿರ್ಧರಿಸಬೇಕು. "ಅದಕ್ಕಾಗಿ ಅವಸರವಾಗಿ ನಾವು ದೇವರ ಕಡೆಗೆ ತಿರುಗೋಣ, ಅವರು ಸುತ್ತಲು ತಿರುಗಾಡಿ ಕೊನೆಗೆ ಮೊದಲು ಎಲ್ಲಿಂದ ಪ್ರಾರಂಭಿಸಿದರೂ ಅಲ್ಲಿಗೆ ಹೋಗಲು ಪ್ರಾರಂಭಿಸುತ್ತಾರೆ."

[20]Allen, 168. [21]ಪಾಪಗಳು ಭೂಲೋಕದಲ್ಲಿ ಪರಿಣಾಮಕಾರಿಯಾಗಿವೆ. ಪ್ರೋತ್ಸಾಹಕ್ಕೆ ಸಂಬಂಧಿಸಿದ್ದು ಮಾರ್ಪಡಿಸುತ್ತಾರೆ. ಅದನ್ನು ಅವರು ಉತ್ಪಾದಿಸುತ್ತಾರ. ಆದರೆ ಮೂಲ ಸತ್ಯ ನಿಲ್ಲುತ್ತದೆ. ಅದು "ಪಾಪ ಪಾಪವೇ" ಆಗಿದೆ. [22]ತಿರುಗಿ ಕ್ರೈಸ್ತರಾಗಲು ಮತ್ತು ಪುನ ಸ್ಥಾಪಿಸಲು ಇದು ಮತಾನಾಡಲು ಉತ್ತಮ ಸ್ಥಳವಾಗಿದೆ, ಮತ್ತು ಆ ಸ್ಥಳವು ಎಲ್ಲರಲ್ಲಿ ತಿರುಗುವಿಕೆ ಮಾಡುವಂತಿದೆ. [23]ಈ ಸಿದ್ಧಾಂತವು ಎರಡು ಭಾಗಗಳಿಗನುಗುಣವಾಗಿ ಮಾತಾಡುತ್ತದೆ. ದೇವರು ಹೊದಗಿಸುವನು ಅಥವಾ ತಿರುಗುವಿಕೆ ಕೊಡುವದು ಕುರಿತು ಮಾತಾಡುತ್ತವೆ (ಅಪೊಸ್ತಲರ ಕೃತ್ಯಗಳು 5:30, 31; 11:18). ದೇವರು ತಿರುಗುವಿಕೆ "ಕೊಡುತ್ತಾನೆ" (1) ತಿರುಗಲು ಅವಕಾಶವನ್ನು ಕೊಡುತ್ತಾನೆ. (2) ಆತನು ತಿರುಗಲು ಪ್ರೋತ್ಸಾಹ ನೀಡುತ್ತಾನೆ ಅಥವಾ ಕೊಡುತ್ತಾನೆ. [24]McGarvey, 103. [25]ಯೇಸು ಅವರಿಗೆ ಹೇಳಿದನು. ನಾನು ಅವರಿಗೋಸ್ಕರ ಸ್ಥಳವನ್ನು ಸಿದ್ಧಮಾಡಲು ಹೋಗುತ್ತಿದ್ದಾನೆ (ಯೋಹಾನ 14:2). [26]ನರಕವು ಸೈತಾನನಿಗೂ ಮತ್ತು ಆತನ ದೂತರಿಗೂ "ಸಿದ್ಧ ಮಾಡಲ್ಪಟ್ಟಿದೆ" ಸೈತಾನನ್ನು ಹಿಂಬಾಲಿಸುವವರು ಸಹ ಅಲ್ಲಿಗೆ ಹೋಗುತ್ತಾರೆ (ಮತ್ತಾಯ 25:41). [27]ನೀನು ಈ ಮೊದಲು ಪ್ರಸಂಗದಲ್ಲಿ ಇದನ್ನು ಹೇಳಿರದಿದ್ದರೆ, ಕ್ರೈಸ್ತನಾಗುವದು ಹೇಗೆ ಎನ್ನುವದರ ಕುರಿತು ವಿವರಣೆ ನೀನು ಕೊಡಬಹುದು (ಅಪೊಸ್ತಲರ ಕೃತ್ಯಗಳು 2:38). ತಪ್ಪು ಮಾಡುವ ದೇವರ ಮಗನು ಪುನಃ ಅವನು ಸೇರಿ ದೇವರಲ್ಲಿಗೆ ಬರುವದು ಹೇಗೆ (ಅಪೊಸ್ತಲರ ಕೃತ್ಯ ಗಳು 8:22). ನೀನು ತಿರುಗುವಿಕೆ ಮಾತ್ರ ಒಂದೇ ಸಾಲದು ಎಂದು ಹೇಳಲು ಇಷ್ಟಪಡುತ್ತಿಯಾ - ಆದರೆ ಅವರು ಒಂದನ್ನು ಎಚ್ಚರವಹಿಸಬೇಕು ಒಂದು ಕಾರ್ಯಮಾಡಲೇಬೇಕು ಅವರು ದೇವರ ಚಿತ್ತದ ಪ್ರಕಾರ ನಡೆಯಬೇಕು (Allen 169-70).